ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 251(603)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಡಾ॥ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಕಳೆದ ಎರಡು ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸರ್ಕಾರವು ಮಂಜೂರು ಮಾಡಿರುವುದಿಲ್ಲವೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಆ) ಅತಿ ಅವಶ್ಯಕತೆ ಇರುವ ಗ್ರಾಮಾಂತರ ಪ್ರದೇಶಗಳಲ್ಲಾದರೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯದೆ ಇದ್ದರೆ ಆ ಪ್ರದೇಶದ ಜನಗಳಿಗೆ ತೊಂದರೆಯಾಗುವುದು ಸರ್ಕಾರ ಮನಗಂಡಿದೆಯೇ?

ಉತ್ತರ

ಅ) ಭಾರತ ಸರ್ಕಾರವು 9ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು "ಶೂನ್ಯಗುರಿ" ನಿಗದಿಪಡಿಸಿರುವುದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುತ್ತಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪೇಮೆಂಟ್ ಸೀಟಿನಲ್ಲಿ ಮೀಸಲಾತಿ ನಿಗದಿ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 253(605)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ (ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

ಪ್ರಶ್ನೆ

ಅ) ವೈದ್ಯಕೀಯ : ದಂತ ವೈದ್ಯಕೀಯ ಮತ್ತು ಇಂಜನಿಯರಿಂಗ್ ವಿಭಾಗದಲ್ಲಿ ಪೇಮೆಂಟ್ ಸೀಟುಗಳನ್ನು ಹಂಚುವಾಗ ಪರಿಶಿಷ್ಟ ಜಾತಿ : ವರ್ಗದವರಿಗೆ ಯಾವ ಕಾರಣಕ್ಕಾಗಿ ಶೇಕಡಾವಾರು ಮೀಸಲಾತಿಯನ್ನು ನೀಡಿರುವುದಿಲ್ಲ

ಆ) ಈ ರೀತಿ ಪೇಮೆಂಟ್ ಸೀಟಿನಲ್ಲಿ ಮೀಸಲಾತಿ ನಿಗಧಿ ಮಾಡಿಲ್ಲದಿರುವುದರಿಂದ, ಸರ್ಕಾರವೇ ಪರಿಶಿಷ್ಟ ಜಾತಿ: ವರ್ಗದವರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ; ಇದರಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಉಂಟಾಗುವ ವಿಚಾರ ಸರ್ಕಾರ ಮನಗಂಡಿದೆಯೇ?

ಉತ್ತರ

ಅ) ಪ್ರಸುತ್ತ ಉಣ್ಣಿಕೃಷ್ಣನ್ ಪ್ರಕರಣದಲ್ಲಿ ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಮೇರೆಗೆ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಅಂದರೆ, ಶೇ.50ರಷ್ಟು ಉಚಿತ ಸೀಟುಗಳು ಮೀಸಲಾತಿ ಹಾಗೂ ಅರ್ಹತೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ. ಉಳಿದ ಶೇ.50ರಷ್ಟನ್ನು ಶೇ.20ರಷ್ಟು ಕರ್ನಾಟಕ ಪೇಮೆಂಟ್ ಸೀಟ್‌ಗಳು ಇತ್ಯಾದಿ ಆದುದರಿಂದ, ಮೀಸಲಾತಿಯನ್ನು ಉಚಿತ ಸೀಟುಗಳಿಗೆ ಮಾತ್ರ ನಿರ್ಬಂಧಿಸಲಾಗಿದೆ.

ಆ) ಇಲ್ಲ. ಪೇಮೆಂಟ್ ಕ್ಯಾಟಗರಿಯಲ್ಲಿನ ಸೀಟುಗಳಿಗಿಂತ ಉಚಿತ ಸೀಟುಗಳಲ್ಲಿನ ಶುಲ್ಕವು ಕಡಿಮೆ ಇರುವುದರಿಂದ, ಉಚಿತ ಸೀಟು ಕ್ಯಾಟಗರಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಿರುವ ಮೀಸಲಾತಿ ಸೌಲಭ್ಯವು ಅಂತಹ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಎತ್ತಿ ಹಿಡಿಯಲಾಗಿದೆ.

ನದಿ ಮೂಲ ಮತ್ತು ಕೆರೆಗಳ ಚಾನಲ್ ಮೂಲಕ ಕುಡಿಯುವ ನೀರನ್ನು ಒದಗಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 254(606)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)